ಕಾಲಕ್ರಮದಂತೆ ಸೆರೆಹಿಡಿದಿರುವುದನ್ನು ಕಾಣಬಹುದು. ಇದು ಸರಳವಾದ ಮಾತೇನೂ ಅಲ್ಲ. ಗಾಂಧಿಯವರ ಮೂಲ ಆತ್ಮಕತೆ – 'ನನ್ನ ಸತ್ಯಾನ್ವೇಷಣೆ'ಯಲ್ಲಿ ಸಿಗದ ಅನೇಕ ಘಟನೆಗಳೂ ಒಳನೋಟಗಳೂ ಇಲ್ಲಿ ಸಿಗುತ್ತವೆ.

ಗೋಪಾಲ ಗಾಂಧಿಯವರು ಇದಕ್ಕೆ ಮೂಲ ಆತ್ಮಕತೆಯ ಆಯ್ದ ಭಾಗಗಳನ್ನು ನಿರಂತರತೆಯನ್ನು ಕಾಪಾಡಲು ಎರವಲು ಪಡೆದರೂ, ಹೆಚ್ಚು ಪುನರಾವರ್ತನೆಯಾಗದಂತೆ ಜಾಗ್ರತೆ ವಹಿಸುತ್ತಾರೆ. ಇದರ ಜೊತೆಗೆ ಗಾಂಧಿಯ ಮಾತುಗಳನ್ನೇ ಟಿಪ್ಪಣಿ ಮಾಡಿಕೊಂಡು ಬರೆದ ಎರಡು ಜೀವನ ಚರಿತ್ರೆಗಳ ಮೊರೆ ಹೋಗುತ್ತಾರೆ. ಈ ಮೂಲಗಳನ್ನೂ ಮೀರಿ ಗಾಂಧಿ ತಮ್ಮ ಮನೆಯವರಿಗೆ ಬರೆದ ಅನೇಕ ಪತ್ರಗಳನ್ನು ಹಿಡಿದು ಇಲ್ಲಿ ಪೋಣಿಸುತ್ತಾರೆ. ಅವರ ಪತ್ರಗಳನ್ನು ಪೋಣಿಸಿ ಕಥನಕ್ಕೆ ಸೇರಿಸಿದಾಗ ಖಾಸಗಿಯಾಗಿ ಬರೆದದ್ದನ್ನು ಬಹಿರಂಗ ಮಾಡಬಹುದೇ ಎನ್ನುವ ನೈತಿಕ ಪ್ರಶ್ನೆ ಉದ್ಭವವಾಗಬಹುದು. ಖಾಸಗಿಯಾಗಿ ಹೇಳುವ ವಿಚಾರಗಳನ್ನು ಅದೇ ಭಾಷಾಪ್ರಯೋಗದೊಂದಿಗೆ ಬಹಿರಂಗವಾಗಿ ಹೇಳುವ ಸಾಧ್ಯತೆಯಿದೆಯೇ? ಮುಖ್ಯವಾಗಿ ತನ್ನ ಸಂಸಾರಕ್ಕೆ – ಪತ್ನಿ ಮಕ್ಕಳಿಗೆ ಬರೆದ ಪತ್ರಗಳು ಕಟುವಾಗಿರಲಿಕ್ಕೂ ಸಾಕು. ಹಿರಿಯ ಮಗ ಹರಿಲಾಲನೊಂದಿಗೆ ಗಾಂಧಿಯವರಿಗೆ ಇದ್ದ ಕಷ್ಟದ ಸಂಬಂಧದ ಎಳೆಗಳೂ ಇಲ್ಲಿ ಕಾಣಿಸುತ್ತವೆ. ಆದರೂ ಅವುಗಳನ್ನು ಯಾವ ಮಡಿಂತಿಕೆಯಿಲ್ಲದೆ ಬಹಿರಂಗವಾಗಿ ಆತ್ಮಕಥೆಯ ಚೌಕಟ್ಟಿನಲ್ಲಿ ತರುವುದರಲ್ಲಿ ತಕರಾರುಗಳಿರಬಹುದೇ? ಗಾಂಧಿ ತಮ್ಮ ಜೀವನವನ್ನು ಪಾರದರ್ಶಕವಾಗಿ ಜೀವಿಸಿದ್ದರಿಂದ, ತಮ್ಮ ವಿಚಾರಗಳನ್ನು ಯಾವ ಮಡಿವಂತಿಕೆಯೂ ಇಲ್ಲದೇ ಬಹಿರಂಗವಾಗಿ ವ್ಯಕ್ತಪಡಿಸುತ್ತಿದ್ದರಾದ್ದರಿಂದ ನಾವು ಆ ಭ್ರಾಮಕ ತಕರಾರನ್ನು ಬದಿಗಿಡಬಹುದು. ಇಂದಿಗೆ ಸಮರ್ಪಕವೆನ್ನಿಸದ ಅನೇಕ ಪದಗಳ ಪ್ರಯೋಗವೂ ಇದೆ. ಆದರೆ ಗೋಪಾಲ ಗಾಂಧಿ ಯಾವುದಕ್ಕೂ ಕತ್ತರಿ ಹಾಕುವುದಿಲ್ಲ. ಯಾವುದನ್ನೂ ತೊಳೆದು ಶುಭ್ರವಾಗಿಸಲು ಪ್ರಯತ್ನಿಸುವದಿಲ್ಲ. ಅದು ಹೇಗಿದೆಯೋ ಹಾಗೇ ಪ್ರಸ್ತುತ ಪಡಿಸುತ್ತಾರೆ.

ಈ ಪುಸ್ತಕ ಗಾಂಧಿ ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ವಾಪಸ್ಸಾಗಬೇಕೆಂದು ನಿರ್ಧರಿಸುವ ಕಾಲಕ್ಕೆ ನಿಲ್ಲುತ್ತದೆ. ಹೀಗಾಗಿ ಇದು ಗಾಂಧಿಯ ಮಾತಿನಲ್ಲಿಯೇ ಸೆರೆಹಿಡಿದ ಅವರ ಚಳವಳಿ ಸತ್ಯಾಗ್ರಹದ ಮೊದಲ ಹಂತದ ಮತ್ತು ಸ್ವಾತಂತ್ರ ಸಂಗ್ರಾಮಕ್ಕೆ ತಯಾರಿಯ ದಿನಗಳ ಕಥೆ ಎನ್ನಬಹುದು. ಗಾಂಧಿಯವರ ಆಗಿನ ನಿಲುವುಗಳ ಬಗ್ಗೆ – ಗೃಹ (ನಾಟಿ) ವೈದ್ಯ, ಉಪ್ಪು ತಿನ್ನುವುದನ್ನು ಬಿಟ್ಟುಕೊಡಬೇಕೆಂದು ಕಸ್ತೂರ್‌ಬಾಗೆ ಸಲಹೆ ನೀಡುವುದು, ಬ್ರಹ್ಮಚರ್ಯ, ಸಸ್ಯಾಹಾರದ ಬಗ್ಗೆ ಅತಿ ಒತ್ತು ನೀಡುವುದು – ಈ ರೀತಿಯ ಅನೇಕ ವಿಚಾರಗಳ ಬಗ್ಗೆ ನಮಗೆ ಭಿನ್ನಾಭಿಪ್ರಾಯವಿರಬಹುದು. ಆದರೆ ಒಂದು ವಿಷಯದಲ್ಲಿ ನಾವು ಗಾಂಧಿಯ ಜೊತೆ ತಕರಾರು ಎತ್ತುವಂತಿಲ್ಲ. ಗಾಂಧಿ ತಾವೇ ಮಾಡಲಾಗದ್ದನ್ನು, ಯಾರಿಗೂ ಉಪದೇಶವಾಗಿ, ನಿರ್ದೇಶನವಾಗಿ ನೀಡುವುದಿಲ್ಲ.

ರಾಮಚಂದ್ರ ಗುಹಾರ ಪುಸ್ತಕ, ಶ್ಯಾಂ ಬೆನೆಗಲ್‌ರ ಚಿತ್ರ ಮತ್ತು ಈ ಪುಸ್ತಕ ಮೂರನ್ನೂ ಬದಿಯಲ್ಲಿಟ್ಟು ಪರೀಕ್ಷಿಸಿದಾಗ ಆತ್ಮಕತೆಯ ಅಪ್ಪಟತನಕ್ಕೂ, ಜೀವನ ಚರಿತ್ರೆಯಲ್ಲಿರುವ ಲೇಖಕರ ವ್ಯಾಖ್ಯಾನಕ್ಕೂ ಇರುವ ಅಂತರವನ್ನು ಕಾಣುತ್ತೇವೆ. ಗಾಂಧಿ ಮಹಾತ್ಮನಾಗುವ ಪ್ರಕ್ರಿಯೆಯ ವಿವರಗಳನ್ನು ಗ್ರಹಿಸುವ ಈ ಪುಸ್ತಕದಲ್ಲಿರುವ ವಿಚಾರಗಳೊಂದಿಗೆ ಅದನ್ನು ಕಟ್ಟಿರುವ ಪ್ರಕ್ರಿಯೆಯಿಂದಾಗಿಯೂ ಕುತೂಹಲಕಾರಿಯಾಗಿದೆ.

ಆತ್ಮಕತೆ ಎನ್ನಿಸಿಕೊಳ್ಳುವ ಈ ಪುಸ್ತಕಕ್ಕೆ ಗೋಪಾಲ್ ಗಾಂಧಿ ಕೊಟ್ಟಿರುವ ಶೀರ್ಷಿಕೆಯನ್ನು ಮಹಾತ್ಮಾ ಗಾಂಧಿ ಕೊಡುತ್ತಿದ್ದರೆ ಅನ್ನುವುದರ ಬಗ್ಗೆ ನನಗೆ ಅನುಮಾನವಿದೆ. ಗಾಂಧಿ ತಮ್ಮನ್ನು ತಾವು 'ಪಾದರಸದಂತೆ ಅಶಾಂತ' (ಚಂಚಲ ಎನ್ನುವ ಅರ್ಥವೂ ಇದೆಯಾದರೂ ಇಲ್ಲಿ ಗಾಂಧಿಯವರು ಅಶಾಂತ ಸಂತರೇ ಆಗಿರುತ್ತಾರೆ) ಎಂದು ಕರೆದುಕೊಳ್ಳುವುದನ್ನು ನಾನು ಊಹಿಸಲಾರೆ. ಆ ಮಾತನ್ನು ಗಾಂಧಿಯ ಸಹೋದರಿ ರಲಿಯಾತ್ ಅನೇಕ ಬಾರಿ ಗಾಂಧಿಯ ಬಗ್ಗೆ ಹೇಳುತ್ತಿದ್ದರಂತೆ. ಜೀವನ ಚರಿತ್ರೆಯ ಶೀರ್ಷಿಕೆಯನ್ನು ಇಲ್ಲಿ ಅನ್ವಯಿಸಿದ್ದು ಸಮರ್ಪಕವೇ ಅನ್ನುವ ಪ್ರಶ್ನೆಯನ್ನು ಕೇಳುತ್ತಲೇ ಈ ಆಸಕ್ತಿಯ ಪುಸ್ತಕವನ್ನು ಓದಬೇಕಾಗಿದೆ.

●